# ಕನಸಿನ ದುಬೈ

ಕಳೆದ ಕೆಲವೇ ದಶಕಗಳಿಂದೀಚೆಗೆ ದುಬೈ ಹೆಚ್ಚು ಶಕ್ತಿಶಾಲಿ ಮತ್ತು ವೈವಿಧ್ಯಮಯ ಆರ್ಥಿಕತೆಯೊಂದಿಗೆ ಒಂದು ಪ್ರಮುಖ ವ್ಯವಹಾರ ಕೇಂದ್ರವಾಗಿ ಬದಲಾಗಿದೆ. ಮಧ್ಯ ಪ್ರಾಚ್ಯದಲ್ಲಿ ದುಬೈ ವ್ಯವಹಾರ ಕೌಶಲದ ಸ್ಥಳವನ್ನು ಹೊಂದಿದೆ ಮತ್ತು ಅತಿದೊಡ್ಡ ಮರು-ರಫ್ತು ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿದೆ. ಇದರ ಕಡಿಮೆ ಖರ್ಚಿನ ಸಾರಿಗೆ ಮತ್ತು ಕಾರ್ಯನಿರ್ವಹಣಾ ವೆಚ್ಚ, ಹಾಗೂ ಅದ್ಭುತವಾದ ಮೂಲಭೂತ ಸೌಕರ್ಯ, ಅಂತರರಾಷ್ಟ್ರೀಯ ದೃಷ್ಟಿಕೋನ ಹಾಗೂ ಪ್ರಗತಿಪರ ಸರಕಾರದ ನೀತಿಗಳು ಹೂಡಿಕೆದಾರರನ್ನು ಬಹುದೊಡ್ಡ ಪ್ರಮಾಣದಲ್ಲಿ ಆಕರ್ಷಿಸುತ್ತಿವೆ.

ದುಬೈನ ಆತ್ಮೀಯವಾಗಿ ಬರಮಾಡಿಕೊಳ್ಳುವ ಜನರು, ವಿಶ್ವದರ್ಜೆಯ ಸೌಕರ್ಯಗಳು ಮತ್ತು ಮೂಲಭೂತ ವ್ಯವಸ್ಥೆ ಹಾಗೂ ದೂರದೃಷ್ಟಿಯ, ಮುಕ್ತ ಹಾಗೂ ಪ್ರಗತಿಪರ ಆರ್ಥಿಕ ನೀತಿಗಳ ಕಾರಣದಿಂದ ಈ ದೇಶಕ್ಕೆ ಹೊರಡುವ ಪ್ರವಾಸಗಳು ಈ ದಿನಗಳಲ್ಲಿ ತುಂಬಾ ಜನಪ್ರಿಯಗೊಳ್ಳುತ್ತಿವೆ. ಜಗತ್ತಿನಾದ್ಯಂತ ಪ್ರವಾಸಿಗರು ದುಬೈ ಅತ್ಯುನ್ನತ ಆರಾಮದಾಯಕ ಮತ್ತು ಐಷಾರಾಮಿ ದರ್ಜೆಯನ್ನು ಒದಗಿಸುತ್ತಿದೆ ಎನ್ನುವುದನ್ನು ಗುರುತಿಸಿದ್ದಾರೆ. ಚುರುಕಾಗಿ ಮತ್ತು ಪ್ರವರ್ಧಮಾನಕ್ಕೆ ಬರುತ್ತಿರುವ ವ್ಯವಹಾರ ಕೇಂದ್ರಕ್ಕೆ ಸೂಕ್ತವಾಗಿರುವಂತೆ ದುಬೈನ ಅತ್ಯಾಧುನಿಕ ಹೋಟೇಲುಗಳು ಪ್ರತಿಯೊಂದು ಐಷಾರಾಮಿ ಸೌಲಭ್ಯಗಳನ್ನು ಒದಗಿಸುತ್ತವೆ. ಹಳೆಯ-ಕಾಲದ ಸೂಕ್(ಮಾರುಕಟ್ಟೆ)ಗಳು ಮತ್ತು ಆಧುನಿಕ ಶಾಪಿಂಗ್ ಮಾಲ್‌ಗಳು, ಹೊರಳುವ ಮರಳಿನ ದಿಣ್ಣೆಗಳು ಮತ್ತು ಹುಲ್ಲುಹಾಸಿನ ಚಾಂಪಿಯನ್‌ಶಿಪ್ ಗಾಲ್ಫ್ ಮೈದಾನಗಳು, ಬೆಡೌಯಿನ್ ಹಳ್ಳಿಗಳು ಹಾಗೂ ಫೈವ್ ಸ್ಟಾರ್ ಹೋಟೇಲುಗಳ ಸಿಂಗಾರ – ಇವುಗಳ ಸಂಯೋಜನೆಯ ಕುತೂಹಲ ಕೆರಳಿಸುವ ನಾಡು ಇದು. ಜಗತ್ತಿನಾದ್ಯಂತ ಬರುವ ಹಲವಾರು ಪ್ರವಾಸಿಗರು ಈ ದೇಶದ ಜಾದೂ ಅನುಭವಿಸಲಿಕ್ಕಾಗಿಯೇ ದುಬೈಗೆ ಭೇಟಿ ನೀಡುತ್ತಾರೆ. ಮರುಭೂಮಿಯ ಗಡಿಯಲ್ಲಿರುವ ಈ ದೇಶ ಪೆಟ್ರೋಲ್ ವ್ಯಾಪಾರದಲ್ಲಿ ಗಳಿಸಿರುವ ಡಾಲರ್‌ಗಳನ್ನು ಬಳಸಿಕೊಳ್ಳುವ ಮೂಲಕ ಮಾನವನಿರ್ಮಿತ ಅದ್ಭುತವಾಗಿ ಬದಲಾಗಿದೆ. ದುಬೈ ವಿಮಾನನಿಲ್ದಾಣದಿಂದ 120ಕ್ಕಿಂತ ಹೆಚ್ಚಿನ ವಿಮಾನಯಾನ ಸಂಸ್ಥೆಗಳ ವಿಮಾನಗಳು ಜಗತ್ತಿನಾದ್ಯಂತ ಇರುವ 260ಕ್ಕಿಂತ ಹೆಚ್ಚಿನ ಸ್ಥಳಗಳಿಗೆ ಟೇಕ್ ಆಫ್ ಆಗುತ್ತಿರುವುದೇ ದುಬೈ ಹೊಂದಿರುವ ಪ್ರಸಿದ್ಧಿಯನ್ನು ತೋರಿಸುತ್ತದೆ. ದುಬೈನ ಆಧುನಿಕ ಆಕರ್ಷಣೆಗಳಲ್ಲೊಂದು ಎಂದರೆ ಜಗತ್ತಿನಲ್ಲಿ ಅತಿ ಎತ್ತರದ ಮಾನವ ನಿರ್ಮಿತ ರಚನೆಯಾದ ಬುರ್ಜ್ ಖಾಲಿಫಾ. 2716 ಅಡಿ ಎತ್ತರವಿರುವ ಈ ಕಟ್ಟಡವು 160ಕ್ಕಿಂತ ಹೆಚ್ಚಿನ ಮಹಡಿಗಳನ್ನು ಹೊಂದಿದೆ. ಈ ಕಟ್ಟಡದ 124ನೇ ಮಹಡಿಯಲ್ಲಿರುವ ವೀಕ್ಷಣಾ ವೇದಿಕೆಯನ್ನು ಜಗತ್ತಿನಲ್ಲಿರುವ ಅತಿಎತ್ತರದ ವೀಕ್ಷಣಾ ವೇದಿಕೆ ಎಂದು ಪರಿಗಣಿಸಲಾಗಿದೆ. ಈ ಕಟ್ಟಡದ ನಿರ್ಮಾಣವನ್ನು 2004ನೇ ಇಸವಿಯಲ್ಲಿ ಪ್ರಾರಂಭಿಸಲಾಯಿತು ಮತ್ತು ಈ ಕಟ್ಟಡದ ಉದ್ಘಾಟನಾ ಸಮಾರಂಭವು 2010ರಲ್ಲಿ ನಡೆಯಿತು. ಒಂದು ಲಕ್ಷ ಹತ್ತು ಸಾವಿರ ಟನ್‌ಗಳಿಗಿಂತ ಹೆಚ್ಚು ತೂಕದ ಈ ಕಟ್ಟಡದ ಅಡಿಪಾಯವನ್ನು ಉಕ್ಕು ಮತ್ತು ಕಾಂಕ್ರೀಟ್ ಬಳಸಿ ನಿರ್ಮಿಸಲಾಗಿದೆ. ಇಂದು ಬುರ್ಜ್ ಖಾಲಿಫಾವನ್ನು ದುಬೈನ ಹೆಮ್ಮೆ ಎಂದು ಪರಿಗಣಿಸಲಾಗಿದೆ, ಒಂದು ದೃಷ್ಟಿಯಿಂದ ಈ ಕಟ್ಟಡದ ನಿರ್ಮಾಣ ಸಮಯದಲ್ಲಿ ಜಗತ್ತಿನಾದ್ಯಂತ ಇರುವ ಬೇರೆ ಬೇರೆ ದೇಶಗಳಿಂದ ಬಂದ 30ಕ್ಕೂ ಹೆಚ್ಚು ನಿರ್ಮಾಣ ಕಂಪನಿಗಳು ಒಗ್ಗಟ್ಟಾಗಿ ಪಣತೊಟ್ಟು ಕೆಲಸ ಮಾಡಿದವು. ಈ ಗೋಪುರದ ವಿನ್ಯಾಸವನ್ನು ಇಸ್ಲಾಮಿಕ್ ವಾಸ್ತುಶಿಲ್ಪದಿಂದ ಆಯ್ದುಕೊಳ್ಳಲಾಗಿದ್ದು ಗೋಪುರದ ಆಕಾರವು ಮರಳುಗಾಡಿನ ಹೂವು ಹೈಮೆನೋಕಾಲಿಸ್ ನಿಂದ ಪ್ರೇರಿತವಾಗಿದೆ. ಈ ಕಟ್ಟಡವು ಐವತ್ತೈದಕ್ಕೂ ಹೆಚ್ಚು ಎಲಿವೇಟರ್‌ಗಳು ಮತ್ತು ಎಂಟು ಎಸ್ಕಲೇಟರ್‌ಗಳನ್ನು ಹೊಂದಿದೆ.

ದುಬೈಗೆ ಭೇಟಿ ನೀಡುವ ಪ್ರವಾಸಿಗರ ಮುಖ್ಯ ಆಕರ್ಷಣೆಯೆಂದರೆ ಗೋಲ್ಡ್ ಸೂಕ್(ಚಿನ್ನದ ಮಾರುಕಟ್ಟೆ). ಇದು ದುಬೈನಲ್ಲಿನ ಸಾಂಪ್ರದಾಯಿಕ ಚಿನ್ನದ ಮಾರುಕಟ್ಟೆಯಾಗಿದೆ. ಮಾರುಕಟ್ಟೆಯು ಚಿನ್ನ, ಬೆಳ್ಳಿ, ಮುತ್ತು ಮತ್ತು ವಜ್ರಗಳನ್ನು ಬಹುತೇಕ ಪ್ರತ್ಯೇಕವಾಗಿ ವ್ಯಾಪಾರ ನಡೆಸುವ 300ಕ್ಕೂ ಹೆಚ್ಚು ವ್ಯಾಪಾರಸ್ಥರನ್ನು ಹೊಂದಿದೆ. ಕೆಲವು ಅಂದಾಜಿನ ಪ್ರಕಾರ ಈ ಮಾರುಕಟ್ಟೆಯಲ್ಲಿ ಯಾವುದೇ ಸಮಯದಲ್ಲಿ ಸರಿಸುಮಾರು 10 ಟನ್ ಚಿನ್ನ ದೊರೆಯುತ್ತದೆ. ಈ ಮಾರುಕಟ್ಟೆಯಲ್ಲಿ ಸ್ವಿಟ್ಜರ್ಲೆಂಡ್ ಅತಿದೊಡ್ಡ ಪೂರೈಸುವ ದೇಶವಾಗಿದ್ದು, ಅದರಂತೆ ಭಾರತವು ಅತಿದೊಡ್ಡ ಕೊಳ್ಳುವ ದೇಶವಾಗಿದೆ. ಈ ಎಲ್ಲ ಆಕರ್ಷಣೆಗಳ ಸಾಕ್ಷ್ಯ ನಂತರ ದುಬೈ ನಿಜವಾಗಿಯೂ ಆಧುನಿಕ ಪವಾಡದ ನೆಲೆ ಎನ್ನುವುದು ಖಚಿತವಾಗುತ್ತದೆ. ಕೇಸರಿಯ ದುಬೈ ಟೂರ್‌ನೊಂದಿಗೆ ಈ ಕನಸಿನ ಮರಳುಗಾಡನ್ನು ಭೇಟಿ ನೀಡುವ ಅವಕಾಶವನ್ನು ನೀವು ಪಡೆಯಿರಿ. ಆರು ದಿನಗಳು ಐದು ರಾತ್ರಿಗಳ ಈ ಪ್ರವಾಸದಲ್ಲಿ ದುಬೈ ಜೊತೆಗೆ ಅಬುದಾಬಿ ಕೂಡ ಒಳಗೊಂಡಿದೆ. ಈ ಪ್ರವಾಸವು ದುಬೈನ ಸೋಜಿಗದ ಆಕರ್ಷಣೆಯ ಭೇಟಿಯೊಂದಿಗೆ ಧೋವ್ ಡಿನ್ನರ್ ಕ್ರೂಸ್ ಮತ್ತು ಡಿಸರ್ಟ್ ಡ್ಯೂನ್ಸ್ ಒಳಗೊಂಡಿರುತ್ತದೆ. ಸಾಂಪ್ರದಾಯಿಕ ಬೆಲ್ಲಿ ನೃತ್ಯವು ಕೇಕ್ ಮೇಲಿನ ಐಸ್ ಸೇರಿರುವುದನ್ನು ತೋರಿಸುತ್ತದೆ. ಕೇಸರಿಯೊಂದಿಗೆ ದುಬೈಗೆ ಹೋಗೋಣ ಬನ್ನಿ. ಈ ಪ್ರವಾಸದ ಹೆಚ್ಚುವರಿ ಮಾಹಿತಿಯು ಕೆಳಗಿನ ದೂರವಾಣಿ ಸಂಖ್ಯೆಯಲ್ಲಿ ಲಭ್ಯವಿದೆ:– 1800 22 1100




Bengaluru 4128 2222 • www.kesari.in • SMS KESARI <space>EUROPE to 56677 • Toll free 1800 22 1100